ನೆರವೇರಿಸುತ್ತಿದ್ದಳು. ಶೀನಿ ಮಾತ್ರ, ದೇವರ ಸಾನ್ನಿಧ್ಯ ಒಂದನ್ನು ಬಿಟ್ಟು ಊರು, ಕೇರಿ, ಹಳ್ಳಕೊಳ್ಳ ಸುತ್ತಾಡಿಕೊಂಡು ಕಾಸು ಬೇಕಾದಾಗ ಮಾತ್ರ ಮನೆಗೆ ಹಾಜರಿ ಒಪ್ಪಿಸುತ್ತಿದ್ದ. ಅದೊಂದು ದಿನ ಆರೋಗ್ಯದಲ್ಲಿ ಹದ ತಪ್ಪಿ, ಕಮಲದ ಮೇಲೆ ನಿಂತು ಕೈಯಲ್ಲಿ ಕಾಸು ಸುರಿಸುತ್ತಿದ್ದ ಲಕ್ಷ್ಮಿಯ ಚಿತ್ರಪಟದ ಕೆಳಗೆ ಚಾಪೆ ಹಾಸಿಕೊಂಡು ನರಸಿಂಹಯ್ಯ ನರಳುತ್ತ ಮಲಗಿದ್ದರು. ಎಂದಿನಂತೆ ಬೀದಿಯಲ್ಲೇ ಕಾಲ ಹಾಕಿ ಮನೆ ಸೇರಿದ ಶೀನಿಗೆ, ಜ್ವರ ಕೆಮ್ಮು, ನೆಗಡಿ ಏರಿಸಿಕೊಂಡು ಹೈರಾಣಾಗಿದ್ದ ಅಯ್ಯನವರು "ಎಲ್ಲಿ ಹಾಳಾಗಿ ಹೋಗಿದ್ದೆಯೋ ಹಲಾಲುಕೋರ?" ಎಂದರು.

'ಮನೆಯಲ್ಲಿ ಕೂತು ಮಾಡುವುದೇನಿದೆ? ನೀನು ಕುಟ್ಟಿದ ಹುಣಸೆ ಬೀಜದ ಪುಡಿಯನ್ನು ನೋಟು ಕೊಟ್ಟವರಿಗೆ ಜೇನುತುಪ್ಪದಲ್ಲೂ, ಬರಿಯ ಕಾಸು ಮಡಗಿದವರಿಗೆ ನೀರಿನಲ್ಲೂ ಕಲೆಸಿ ಕುಡಿಯಿರಿ ಅಂತ ಹೇಳಬೇಕೇ? ನಾನು ನಿನ್ನ ಮುಂದೆ ಕುಕ್ಕರುಬಡಿದು ಪರಿಚಾರಿಕೆ ಮಾಡಲು ನಿನ್ನದೇನು ದಿವಾನ್‌ಗಿರಿಯೇ?' ಎಂದ. ರುದ್ರಕೋಪ ಹತ್ತಿಸಿಕೊಂಡ ಅಯ್ಯನವರು ಕೈ ಅಳತೆಯ ದೂರದ ಭಸ್ಮದ ಡಬ್ಬಿ ತೆಗೆದು ಶೀನಿಯ ಕಡೆಗೆ ಎಸೆದರು.

ಪಕ್ಕವೇ ಕೂತು ಗೋವಿಂದ ಯಂತ್ರದ ತಗಡಿಗೆ ಹನುಮಂತನ ಚಿತ್ರ ಬರೆದು ಅರಿಸಿನದ ದಾರ ಸುತ್ತುತ್ತಿದ್ದವನು ಅಯ್ಯನವರ ಕೋಪವನ್ನು ತಡೆಯದಾದ. ಗುಡಿಯ ವಪ್ಪಾರೆಯಿಂದ ಬಂದಿದ್ದ ರಾಜಿ, ಬಟ್ಟೆಯಲ್ಲಿ ಕಪ್ಪು ಎಳ್ಳು ಇರಿಸಿ ಗಂಟು ಕಟ್ಟುತ್ತಿದ್ದವಳು. ತನಗೂ ನಿರ್ನಿಮಿತ್ತ ಬೈಗುಳ ತಗುಲಬಹುದೆಂದು ಹೊರ ನಡೆದಳು. ಏಟು ತಪ್ಪಿಸಿಕೊಂಡು ಮುಸುಡಿ ಕೆಂಪಗೆ ಮಾಡಿಕೊಂಡ ಶೀನಿ 'ಅಮ್ಮನ್ನನ್ನು ಆಪೋಶನ ತೆಗೆದುಕೊಂಡೆ, ಅಡುಗೆ ಎಂದು ಮನೆ ಬಿಟ್ಟ ರಾಜಿಯ ಗಂಡ ಪತ್ತೆ ಇಲ್ಲ, ಇನ್ನು ಉಳಿದಿರುವ ನಮ್ಮನ್ನೂ ಬಲಿ ಹಾಕಿಬಿಡು, ನಿನ್ನ ಪಂಚಾಂಗದ ಹಾಳೆಗಳಿಗೆ, ಮೂರು ಕಾಸಿನ ಮಂಗಳಾರತಿ ಸಂಪಾದನೆಗೆ, ಆರು ಕಾಸಿನ ಚೂರ್ಣದ ದುಡ್ಡಿಗೆ ಯಾರು ತಾನೇ ಕಾಯುವರು. ಆಸ್ತಿ ಭಾಗ ಮಾಡು, ಇಲ್ಲಾ ಹತ್ತು ಸಾವಿರ ಬಿಸಾಕು. ಊರು ಖಾಲಿ ಮಾಡುತ್ತೇನೆ, ತಿರುಗಿ ಬಂದರೆ ನಿನ್ನಾಣೆ,' ಎಂದು ಕುದುರೆಯಂತೆ ಕೆನೆದ.

ಅಯ್ಯನವರು ತಿರುಗಿ ಕೆಂಡಕೊಂಡದಂತೆ ಉರಿದೆದ್ದು, ರಾಜಿ ಗಂಟು ಕಟ್ಟಿ ಇರಿಸಿದ್ದ ಎಳ್ಳುಗಂಟಿನ ಕಟ್ಟನ್ನೆತ್ತಿ ಶೀನಿಯ ಕಡೆಗೆ ತೂರಿದರು. ಏಟು ತಪ್ಪಿಸಿಕೊಂಡು ಶೀನಿ ಮನೆಯಾಚೆ ಗುಟುರು ಹಾಕುತ್ತಾ ಓಡಿದ. ಗಂಟು ಕಂಬಕ್ಕೆ ಬಡಿದು, ಎಳ್ಳು ಕಾಳು ಮನೆಯಲ್ಲಾ ಚೆಲ್ಲಿತು. ಭಯಬಿದ್ದ ಗೋವಿಂದ, 'ಅಪ್ಪ, ಶನಿವಾರ ಭಕ್ತರು ಜಾಸ್ತಿ. ಅವನ ಮೇಲಿನ ಸಿಟ್ಟನ್ನು ಎಳ್ಳಿನ ಮೇಲೆ ಯಾಕೆ ಕಾಣಿಸುತ್ತೀರಿ,' ಎಂದ. 'ಎಲಾ ಗೂಬೆ, ನೀನೊಬ್ಬ ಬಂದೆಯಾ ನನಗೆ ಬುದ್ಧಿ ಹೇಳಲು, ಇನ್ನಷ್ಟು ಎಳ್ಳು ತಾ, ನೀರು ಸೇರಿಸಿ ಆ ಬಾಡ್ಯನಿಗೆ ತರ್ಪಣ ಬಿಡುತ್ತೀನಿ,' ಎಂದು ಅಬ್ಬರಿಸಿದರು.

ಸಾವಕಾಶವಾಗಿ, ಗೋವಿಂದನು ತಂದೆಗೆ ಶೀನಿಯ ಜಾತಕ ಬರೆದದ್ದನ್ನು, ಅವನ ಮುಂದಿನ ಗಜಕೇಸರಿಯೋಗವನ್ನು ನೆನಪಿಸುತ್ತಾ, 'ಅಪ್ಪ, ನಿಮಗೇ ಗೊತ್ತು, ಈಗ ಟೈಮು ಸರಿಯಿಲ್ಲ. ಅವನ ಕುಣಿದಾಟಕ್ಕೆ ಗ್ರಹಗತಿ ಸ್ಥಾನಗಳೇ ಕಾರಣವಾಗಿ ನಿಧಾನದಲ್ಲಿ ರಾಶಿಫಲ ಬದಲಾಗಬಹುದು. ಅಲ್ಲಿಯವರೆಗೆ ಅವನಿಂದ ನಮಗೆ, ನಮ್ಮಿಂದ ಅವನಿಗೆ ಕೇಡಿನ ಮಾತು ತಪ್ಪಿದ್ದಲ್ಲ ಅಂದಿದ್ದಿರಿ, ಅವನು ಮನೆಗೆ ಬರಲಿ, ಶಾಂತಿ ಮಾಡಿಸೋಣ. ಸದ್ಯ ನಿಮ್ಮ ಕೆಟ್ಟಿರುವ ಆರೋಗ್ಯ ಸುಧಾರಿಸಲಿ, ರವಷ್ಟು ತಾಳಿ,' ಎಂದು ಸಮಾಧಾನದ ಮಾತಾಡಿದ.

★★★

ಶ್ರೀನಿವಾಸ ಮನೆ ಬಿಟ್ಟಾಗಲೇ ಹೊತ್ತು ಮುಳುಗುತ್ತಿತ್ತು. ಅಮವಾಸ್ಯೆಗೆ ಒಂದೆರೆಡು ದಿನ ಇದ್ದಿರಬೇಕು. ಸರಿ ರಾತ್ರಿಯ ವರೆಗೂ ಊರ ತೋಪಿನಲ್ಲೇ ಅಡಗಿದ್ದು, ಮಧ್ಯರಾತ್ರಿ ಆಂಜನೇಯನ